# ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತಾ ನೀತಿ

JSW ಸ್ಟೀಲ್ ಔದ್ಯೋಗಿಕ ಆರೋಗ್ಯ ಮತ್ತು ಕಾರ್ಮಿಕರನ್ನು ಒಳಗೊಂಡಂತೆ ಅದರ ಆಸಕ್ತ ಪಕ್ಷಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ಮತ್ತು ಪ್ರಾಮುಖ್ಯತೆಯನ್ನು ನೀಡುತ್ತದೆ. ಶೂನ್ಯ ಗಾಯವನ್ನು ಖಚಿತಪಡಿಸಿಕೊಳ್ಳಲು ಸುರಕ್ಷಿತ ಅಭ್ಯಾಸಗಳನ್ನುಅನುಷ್ಠಾನಗೋಳಿಸುವುದರಲ್ಲಿ ಮಾದರಿಯಾಗಲು ನಾವು ಶ್ರಮಿಸುತ್ತೇವೆ.

**ಈ ಕೆಳಗಿನ ಅಂಶಗಳಿಗೆ ನಾವು ಬದ್ಧರಾಗಿದ್ದೇವೆ**

- ಕಾನೂನು ಮತ್ತು ಇತರ ಅವಶ್ಯಕತೆಗಳಿಗೆ ಸಂಬಂಧಿಸಿದ ಅನುಸರಣೆಯನ್ನು ಮೀರಿ ಅನುಸರಿಸುವುದು.
- ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ವಾತಾವರಣವನ್ನು ಸೃಷ್ಟಿಸಲು ವ್ಯವಸ್ಥೆಗಳನ್ನು ಮತ್ತು ಪ್ರಕ್ರಿಯೆಗಳನ್ನು ಸ್ಥಾಪಿಸುವುದು.
- ಪೂರ್ವಭಾವಿ ವಿಧಾನದಿಂದ ಎಲ್ಲಾ ಪಾಲುದಾರರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಅಪಾಯಗಳ ಮೌಲ್ಯಮಾಪನ ಮಾಡಿ ತಗ್ಗಿಸುವುದು.
- ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಪರಿಸ್ಥಿತಿಗಳನ್ನು ಒದಗಿಸುವ ಮೂಲಕ ಮತ್ತು ಉತ್ತಮ ಅಭ್ಯಾಸಗಳನ್ನು ಅಳವಡಿಸುವ ಮೂಲಕ ಅಪಾಯಗಳನ್ನು ತೆಗೆದುಹಾಕುವುದು ಮತ್ತು ಗಾಯಗಳು ಮತ್ತು ಔದ್ಯೋಗಿಕ ಅನಾರೋಗ್ಯದ ಅಪಾಯವನ್ನು ತಡೆಗಟ್ಟುವುದು.
- ಸಹವರ್ತಿಗಳು, ಗುತ್ತಿಗೆದಾರರು, ಅಪ್ರೆಂಟಿಸ್‌ಗಳು, ಸಾರಿಗೆ ಕಾರ್ಮಿಕರು ಮತ್ತು ಪೂರೈಕೆದಾರರು ಸೇರಿದಂತೆ ಕಾರ್ಮಿಕರಿಗೆ ತರಬೇತಿ ನೀಡುವ ಮೂಲಕ ಅರಿವು ಮೂಡಿಸುವುದು.
- ಆಕ್ಯುಪೇಷನಲ್ ಹೆಲ್ತ್ ಮತ್ತು ಸೇಫ್ಟಿ ಮ್ಯಾನೇಜ್ಮೆಂಟ್ ಸಿಸ್ಟಮ ನ ನಿರಂತರ ಸುಧಾರಣೆ.
- ನಮ್ಮ ಪಾಲುದಾರರ ಆರೋಗ್ಯ ಮತ್ತು ಸುರಕ್ಷತೆಯ ಮೇಲೆ ದೀರ್ಘಾವಧಿಯ ಪ್ರಭಾವವನ್ನು ಪರಿಗಣಿಸಿ ಕಾರ್ಖಾನೆ , ಉಪಕರಣಗಳು, ಯಂತ್ರೋಪಕರಣಗಳು ಮತ್ತು ವಸ್ತುಗಳ ಆಯ್ಕೆ.
- OHS ಅಪಾಯಗಳು, ಘಟನೆಯ ತನಿಖೆ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಕಾರ್ಮಿಕರು ಮತ್ತು ಅವರ ಪ್ರತಿನಿಧಿಗಳ ಸಮಾಲೋಚನೆ ಮತ್ತು ಭಾಗವಹಿಸುವಿಕೆಯನ್ನು ಖಚಿತಪಡಿಸುವುದು.

ಈ ನೀತಿ ಮತ್ತು ಇದರ ಅನುಷ್ಠಾನದ ಮಟ್ಟವನ್ನು ನಿಯತಕಾಲಿಕವಾಗಿ ಪರಿಶೀಲಿಸಲಗುವುದು ಮತ್ತು ಇದನ್ನ ಸಂಸ್ಥೆಯೊಳಗೆ ಸಂಬಂಧಿಸಿದ ಎಲ್ಲರಿಗೂ ತಿಳಿಸುವುದು ಮತ್ತು ಎಲ್ಲಾ ಮಧ್ಯಸ್ಥಗಾರರಿಗೆ / ಆಸಕ್ತ ಪಕ್ಷಗಳಿಗೆ ಸೂಕ್ತವಾಗಿ ಲಭ್ಯವಾಗುವಂತೆ ಮಾಡುವುದು.

P.K.M

ಪಿ ಕೆ ಮುರುಗನ್
**ಅಧ್ಯಕ್ಷರು**

**Rev No: 06**
**ದಿನಾಂಕ: 24ನೇ ಜನವರಿ 2024**